# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583105.

ಕುಲಸಚಿವರು (ಮೌಲ್ಯಮಾಪನ) ದೂರವಾಣಿ: 08392-242011


ಸಂಖ್ಯೆ:/ವಿಶ್ರೀಕೃವಿಬ/ಪರೀಕ್ಷಾ/ಸುತ್ತೋಲೆ/2020-21/ 422 ದಿನಾಂಕ: 24/07/2020

## : ಸುತ್ತೋಲೆ :

**ವಿಷಯ** : ಸೆಪ್ಟಂಬರ್-2020ರಲ್ಲಿ ಜರುಗಲಿರುವ ಸ್ನಾತಕ/ಸ್ನಾತಕೋತ್ತರ ಪದವಿಗಳ ಲಿಖಿತ ಪರೀಕ್ಷೆ ಕುರಿತು.

**ಉಲ್ಲೇಖ** : 1. ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಿರ್ಣಯ ಹಾಗೂ ಅನುಮೋದನೆ ದಿನಾಂಕ : 13.07.2020.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 23.07.2020

*****

ಈ ಸುತ್ತೋಲೆ ಮೂಲಕ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ಮುಖ್ಯಸ್ಥರು/ಸಂಯೋಜಕರು/ ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರು/ವಿಶೇಷಾಧಿಕಾರಿಗಳು ಮತ್ತು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಸಂಯೋಜಿತ ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ಗಮನಕ್ಕೆ ತರಬಯಸುವುದೇನೆಂದರೆ, ಕೋವಿಡ್ –19 ಹಿನ್ನೆಲೆಯಲ್ಲಿ ಮುಂಬರುವ ಸ್ನಾತಕ/ಸ್ನಾತಕೋತ್ತರ ಕೋರ್ಸಗಳ ಲಿಖಿತ ಪರೀಕ್ಷೆಗಳನ್ನು ನಡೆಸಲು ಸರ್ಕಾರದ ಆದೇಶ ಸಂಖ್ಯೆ : ED/197/UNE/2020 : Dated:10.07.2020, ಪ್ರಕಾರ 01.09.2020ರಿಂದ ನಡೆಸಲು ತೀರ್ಮಾನಿಸಲಾಗಿದ್ದು, ತಾವುಗಳು ಈ ಕೆಳಗಿನಂತೆ ತಮ್ಮ ವಿಭಾಗಗಳು/ ಮಹಾವಿದ್ಯಾಲಯಗಳಲ್ಲಿ ಪರೀಕ್ಷಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಸೂಚಿಸಲಾಗಿದೆ.

1. ವಿದ್ಯಾರ್ಥಿಗಳು, ಪರೀಕ್ಷಾ ಕರ್ತವ್ಯ ನಿರತ ಸಿಬ್ಬಂದಿ ಹಾಗೂ ಕೊಠಡಿ ಮೇಲ್ವಿಚಾರಕರು **ಥರ್ಮಲ್ ಸ್ಕ್ರೀನಿಂಗ್**ಗೆ ಒಳಪಡುವುದು ಕಡ್ಡಾಯವಾಗಿದೆ.
2. ಪರೀಕ್ಷಾ ಕೋಠಡಿಗಳನ್ನು **ಸ್ಯಾನಿಟೈಜರ್‌ನಿಂದ** ಶುದ್ಧಗೊಳಿಸುವುದು.
3. ವಿದ್ಯಾರ್ಥಿಗಳು, ಪರೀಕ್ಷಾ ಕರ್ತವ್ಯ ನಿರತ ಸಿಬ್ಬಂದಿ ಹಾಗೂ ಕೊಠಡಿ ಮೇಲ್ವಿಚಾರಕರು **ಮಾಸ್ಕ್ ಧರಿಸುವುದು ಕಡ್ಡಾಯವಾಗಿದೆ.**
4. ವಿದ್ಯಾರ್ಥಿಗಳಲ್ಲಿ ಪರಸ್ಪರ ಅಂತರ ಕಾಯ್ದುಕೊಳ್ಳುವಂತೆ ಡೆಸ್ಕ್‌ಗಳನ್ನು ಆಯೋಜಿಸುವುದು ಹಾಗೂ ಬ್ಯಾರಿಕೇಡ್‌ಗಳನ್ನು ಅಳವಡಿಸುವುದು.
5. ತಮ್ಮ ಮಹಾವಿದ್ಯಾಲಯಗಳ/ವಿಭಾಗಗಳ ಅಧಿಕೃತ **ಇ-ಮೇಲ್ ವಿಳಾಸ ಕಡ್ಡಾಯವಾಗಿ** ಈ ಕಛೇರಿಗೆ ಸಲ್ಲಿಸತಕ್ಕದ್ದು.
6. ವಿದ್ಯುತ್ ಉಪಕರಣಗಳಾದ ಜನರೇಟರ್/ಇನ್‌ವರ್ಟರ್, ಝುರಾಕ್ಸ್ ಯಂತ್ರ ಇಂಟರ್‌ನೆಟ್ ಮತ್ತು ಕಂಪ್ಯೂಟರ್ ಪ್ರಿಂಟರ್‌ಗಳ ವ್ಯವಸ್ಥೆ ಮಾಡಿಕೊಳ್ಳುವುದು.
7. ಪ್ರತಿ ವಿದ್ಯಾರ್ಥಿಯ ಪರೀಕ್ಷಾ ಆಸನದ ವಿವರವನ್ನು ಮುಂಚಿತವಾಗಿ ಹಾಗೂ ಕಡ್ಡಾಯವಾಗಿ SMS/ What's up/ E-mail/ ಮೂಲಕ ತಿಳಿಸುವುದು.

ಮುಂದುವರೆದು, ಈ ಮೇಲಿನ ಅಂಶಗಳಲ್ಲದೇ Ministry of Home affairs Order No : 40-3/2020-DM-I(A) : Dated : 29 June 2020 ರ S O P Guidelines ಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಲಾಗಿದೆ.

ಕುಲಸಚಿವರು (ಮೌಲ್ಯಮಾಪನ) 24/7/2020
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಗೆ,

ಸಂಬಂಧಪಟ್ಟ ಎಲ್ಲಾ ಸ್ನಾತಕ/ಸ್ನಾತಕೋತ್ತರ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ,

ಪ್ರತಿಗಳನ್ನು :

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯಾದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ರವರಿಗೆ ಮಾಹಿತಿಗಾಗಿ
2. ಕುಲಸಚಿವರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ
3. ಗಣಕಯಂತ್ರ ಶಾಖೆ, ವಿಶ್ರೀಕೃ ವಿಶ್ವವಿದ್ಯಾಲಯ ಬಳ್ಳಾರಿ – ಈ ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಪ್ರತಿ.